# ಸೆಖೆಯ ಸುಖ!

ಮಾಗಿ ಮುಗಿದು ಗ್ರೀಷ್ಮ ಬಂದಿದೆ. ಸ್ವಾಭಾವಿಕ ಹವಾನಿಯಂತ್ರಿತ ಪ್ರದೇಶವೆಂದು ಹಿಂದೊಮ್ಮೆ ಕರೆಸಿಕೊಳ್ಳುತ್ತಿದ್ದ ಮೈಸೂರು–ಬೆಂಗಳೂರು ಪ್ರದೇಶಗಳು ಈಗ ಕಡು ಬೇಸಿಗೆಯ ತಾಣಗಳಾಗಿ ಬದಲಾಗುತ್ತಿವೆ. ಇನ್ನು ಸದಾ ಬೇಸಿಗೆಯನ್ನೇ ಬದುಕಿನ ಭಾಗವೆಂದು ತಿಳಿದು ಜೀವಿಸುತ್ತಿರುವ ಕಲ್ಯಾಣ ಕರ್ನಾಟಕ ಭಾಗದ ಸುಡುಬಿಸಿಲಿನ ಬಗ್ಗೆ ಮಾತನಾಡುವುದಾದರೂ ಏನು? ತಂಪನೆಯನ್ನು ಕಳೆದುಕೊಂಡ ಜೀವಕ್ಕೆ ಏನೋ ಆಯಾಸ; ಏನೋ ಉಬ್ಬಸ; ತಣ್ಣನೆಯ ಗಾಳಿಯನ್ನು, ತಂಪು ನೆಲೆಯನ್ನು ಕಾಣುವ ತವಕ. ಆದರೆ, ಎಲ್ಲೆಲ್ಲೂ ಬಿಸಿ! ಎಲ್ಲವೂ ಬಿಸಿ! ತೆಗೆದುಕೊಳ್ಳುವ ಉಸಿರು ಬಿಸಿ, ಬಿಡುವ ಉಸಿರೂ ಬಿಸಿ!! ಸುಡು ಬಿಸಿಲನ್ನು ಬಯ್ದುಕೊಂಡು ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೇಗೋ ಹಗಲು ಕಳೆದುಹೋಗುತ್ತದೆ.

ಆದರೆ ಬೇಸಿಗೆಯ ರಾತ್ರಿಗಳು ಮತ್ತಷ್ಟು ಸೆಕೆಯಿಂದ ಅಸಹನೀಯವಾಗುತ್ತವೆ. ನಗರದ ತಾರಸಿಯ ಮನೆಗಳು ಹಬೆಯ ಗೂಡುಗಳಾಗುತ್ತವೆ; ತಮ್ಮೊಳಗೆ ಅಗಾಧ ಬೆಂಕಿಯ ನಿಗಿನಿಗಿ ಕೆಂಡದುಂಡೆಗಳನ್ನಿಟ್ಟುಕೊಂಡು ದಹಿಸಿಕೊಳ್ಳುತ್ತಿರುವ ಇಟ್ಟಿಗೆಯ ಗೂಡುಗಳಂತಾಗುತ್ತವೆ. ಕೃತಕಗಾಳಿ ಬೀಸುವ ಫ್ಯಾನುಗಳು ತಿಂದದ್ದನ್ನೇ ತಿಂದು ಕಕ್ಕುವ ಪ್ರಾಣಿಯಂತೆ ಬಿಸಿಗಾಳಿಯನ್ನೇ ಕಕ್ಕುತ್ತವೆ. ಅದರಿಂದ ಬದುಕು ಮತ್ತಷ್ಟು ಅಸಹನೀಯವಾಗಿ ಬಟ್ಟೆಗಳನ್ನೇ ಕಿತ್ತೆಸೆಯುತ್ತೇವೆ! ಮೈಯಿಂದ ಬೆವರು ಸುರಿಯುತ್ತದೆ. ನಲ್ಲನಿಗೆ ಪಕ್ಕದಲ್ಲೇ ಮಲಗಿರುವ ನಲ್ಲೆಯ ದೇಹವನ್ನು 'ದೂರವಿರು'ಎಂದು ಬೇಡಿಕೊಳ್ಳುತ್ತದೆ! 'ಕೂಡಿಸುವ'ಕಾಮದೇವ ಬಿರುಬೇಸಿಗೆಯ ತಾಪಕ್ಕೆ ಹೆದರಿ ತಂಪನ್ನರಸಿ ಎಲ್ಲಿಗೋ ಮಾಯವಾಗುತ್ತಾನೆ! ಕತ್ತಲಲ್ಲಿ ಕತ್ತಲಾಗಿ ಸೆಕೆಯ ಹೊಡೆತಕ್ಕೆ ಬೆತ್ತಲಾಗಿ ಹಾಸಿಗೆಯಲ್ಲಿ ಹೊರಳಾಡಿ ಸುಸ್ತಾದ ಜೀವಕ್ಕೆ ಬೆಳ್ಳಿಚುಕ್ಕಿ ಮೂಡುವ ಹೊತ್ತಿನಲ್ಲಿ ನಿದ್ರೆ ಆವರಿಸಿಕೊಳ್ಳುತ್ತದೆ. ಮುಂಜಾನೆ ಏಳುವುದು ತಡವಾಗುತ್ತದೆ. ದಿನದ ಕೆಲಸಗಳೆಲ್ಲಾ ಅಸಹ್ಯವಾಗುತ್ತವೆ.

ಹಳ್ಳಿಗಳು ನಗರಗಳೆನ್ನದೆ, ಹೊಲಗದ್ದೆ ಬಯಲು ಕಾಡುಗಳಲ್ಲಿ ಕೂಡ ನಡುಹಗಲಿನ ಕಡುಬೇಸಿಗೆಯಲ್ಲಿ ಮೌನ ತುಂಬಿಕೊಳ್ಳುತ್ತದೆ. ಜೀವಗಳು ನೆರಳ ತಂಪನ್ನರಸಿ ಗೂಡು ಸೇರಿಕೊಳ್ಳುತ್ತವೆ; ರಸ್ತೆಗಳು ಜನರಹಿತವಾಗುತ್ತವೆ; ಪಕ್ಷಿಗಳು ಮರದೆಲೆಯ ಮರೆಯಲ್ಲಿ ಕೂತು ತೂಕಡಿಸುತ್ತವೆ; ಕಾಡುಪ್ರಾಣಿಗಳು ಗುಹೆ–ಪೊದೆಗಳಲ್ಲಿ ಕಣ್ಮುಚ್ಚಿ ಬಿಸಿ ಉಸಿರು ಬಿಡುತ್ತವೆ. ಈ ನಡುಹಗಲ ಮೌನವನ್ನು ಕಂಡು ಕುವೆಂಪು 'ವ್ಯೋಮದ ಕವಿ, ಭೂಮಿಯ ಕವಿ ಪ್ರೇಕ್ಷಕರಿನ್ನೊಬ್ಬರ ಕಾಣೆ, ಜಡ ಚೇತನದಾಲಿಂಗನ॥ ಜುಮ್ಮೆಂದಿದೆ ಮೈ, ಶಿವನಾಣೆ!' ಎಂದು ಆಶ್ಚರ್ಯದಿಂದ ಉದ್ಗರಿಸುತ್ತಾರೆ.

ತಮ್ಮ ಋತುವೈಭವದ ವರ್ಣನೆಯಲ್ಲಿ ಕವಿ ಕೆ.ಎಸ್.ನ ಅವರು ಬೇಸಿಗೆಯ ಭೀಕರ ಪರಿಣಾಮವನ್ನು ಸಹೃದಯದ ಎದೆಯಲ್ಲಿ ಪಡಿಮೂಡುವುದು ಹೀಗೆ: 'ಉರಿಬಿಸಿಲು ನಿಟ್ಟುಸಿರ ಕದ ತೆರೆಯಿತು; | ಬಿಸಿಗಾಳಿ ಬೀದಿಯಲಿ ಸಂಚರಿಸಿತು.| ... ಗಿಡದಲ್ಲಿಯೆ ಬರಿದಾಗಿದೆ ದಳವಿರದ ಗುಲಾಬಿ;| ಕೆರೆಯೊಣಗಿದೆ, ಕೆಸರಾಗಿದೆ; ಕಂಗಟ್ಟಿವೆ ಮೀನು;| ಮಾತಾಡದೆ ನೋಡುತ್ತಿದೆ ತುಟಿಯಿಲ್ಲದ ಬಾನು.' ಮಳೆಸುರಿಸಬೇಕಾದ, ಮೋಡ ಹೊತ್ತು ಭರವಸೆ ನೀಡಬೇಕಾದ ಬಾನು ಮಾತಾಡದೆ ಮೌನವಾಗಿರುವುದು ಏನನ್ನ ಕಂಡು? ದಳವಿರದ ಗುಲಾಬಿಯನ್ನೇ? ನೀರಿಲ್ಲದ ಕೆಸರಲ್ಲಿ ಜೀವಕ್ಕಾಗಿ ನರಳಾಡುತ್ತಿರುವ ಮೀನಿನ ಸಂಕಟವನ್ನೇ? ಸುಡು ಬೇಸಿಗೆಯ ಕಡುತನವನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿದ್ದಾರೆ, ಕವಿ. ಆದರೆ ಇಂದು ಬೇಸಿಗೆಯಲ್ಲಿ ಕೆರೆಯ ನೀರು ಸುಂಡಿ ಕೆಸರಾಗಿ ನಿಲ್ಲುವುದೇ ಇಲ್ಲ! ನೀರು ಸಂಪೂರ್ಣ ಬತ್ತಿಹೋಗಿ, ಕೆಸರು ಮಾಯವಾಗಿ, ಮೀನು ಇನ್ನಿತರ ಜಲಚರಗಳು ನೀರಿಲ್ಲದೆ ಸೋತು ಸೊರಗಿ 'ಬಾತು' ಸತ್ತು ಹೋಗುತ್ತವೆ. ಇಂದಿನ ಸ್ಥಿತಿಯನ್ನು ಕಂಡಿದ್ದರೆ ಕೆ.ಎಸ್ ನ ಅವರಿಂದ ಮತ್ತೆಂಥಾ ಅಭಿವ್ಯಕ್ತಿ ಬರುತ್ತಿತ್ತೋ?

ತನ್ನ ತವರಿನ ತಂಪುಶ್ರೀ ಆದ ತಾಯಿಯನ್ನು ನೆನೆಯುತ್ತಾ ಜನಪದ ಗರತಿ ಅವಳನ್ನೂ ಬೇವಿನ ಮರದ ತಂಪಿಗೆ ಹೋಲಿಸುತ್ತಾಳೆ. (ಬ್ಯಾಸಿಗೆ ದಿವಸಾಕ ಬೇವಿನ ಮರದ ತಂಪ...) ಸುತ್ತೆಲ್ಲ ಸುತ್ತಲಿನ ಬಿಸಿಲಿನ ಝಳಕ್ಕೆ ಸುಸ್ತಾಗಿ ನಲುಗಿರುವ ಜೀವಗಳಿಗೆ ಸೊಂಪಾಗಿ ಚಿಗುರಿ ಒತ್ತಾದ ಹಸಿರು ಎಲೆಗಳಿಂದ ಕೂಡಿದ ಬೇವಿನ ಮರದ ನೆರಳು ಎಷ್ಟು ಹಿತಕರವಾಗಿರುತ್ತದೆ ಎಂಬುದನ್ನು ಅನುಭವಿಸಿದವರು ಮಾತ್ರ ಹೇಳಲು ಸಾಧ್ಯ. ಉತ್ತರ ಕರ್ನಾಟಕದಲ್ಲಿ ಬೇವಿನ ಮರದ ಜೊತೆಯಲ್ಲಿ ಹೊಂಗೆಯ ಮರಗಳು ಅತಿ ಹೆಚ್ಚಾಗಿ ತಮ್ಮ ಸೊಂಪಿನ ನೆರಳಿಂದ ಜನರನ್ನು ಆಕರ್ಷಿಸುತ್ತವೆ. ಕೆರೆಕಟ್ಟೆಗಳ ಏರಿಯ ಮಗ್ಗುಲಲ್ಲಿ, ನದಿ ಹೊಳೆಗಳ ಇಕ್ಕೆಲಗಳಲ್ಲಿ ಹೊಂಗೆಯ ಮರಗಳನ್ನು ಹುಲುಸಾಗಿ ನಮ್ಮ ಜನ ಬೆಳೆಸಿರುತ್ತಾರೆ. ಸುಡುಬೇಸಿಗೆಯ ದಣಿವನ್ನಾರಿಸಿಕೊಳ್ಳಲು ರೈತಾಪಿ ಗ್ರಾಮೀಣ ಜನರು ಆ ಮರಗಳ ನೆರಳನ್ನು ಆಶ್ರಯಿಸುತ್ತಾರೆ. ಅವರ ಜೊತೆಯಲ್ಲಿ ಅವರ ಸಾಕುಪ್ರಾಣಿಗಳಾದ ಆಡು, ಕುರಿ, ದನ, ಎಮ್ಮೆ, ನಾಯಿಗಳು ಕೂಡ ಆ ಮರದ ತಂಪಿನ ಸುಖವನ್ನು ಸವಿದು ಬಿಸಿಲತಾಪವನ್ನು ಮರೆಯುತ್ತವೆ.

ಬೇಸಿಗೆಯ ಕಡುತಾಪವು ಗ್ರಾಮೀಣ ಪ್ರದೇಶದ ಜನರಿಗೆ ನಗರದ ಜನರನ್ನು ಕಾಡುವಷ್ಟು ಕಾಡುವುದಿಲ್ಲ. ಕಾರಣ – ನಗರಗಳ ಸಿಮೆಂಟ್ ಕಟ್ಟಡಗಳು ಕಿರಿದಾದ ಒತ್ತೊತ್ತಾದ ಕೇರಿಗಳು, ಹಿಡಿಕಿರಿದ ಮನೆಗಳು, ಅತಿಯಾದ ಜನಸಂದಣಿ. ಆದರೆ ಗ್ರಾಮಗಳ ಹೆಂಚಿನ ಮನೆಗಳು, ಸೋಗೆ ಗುಡಿಸಲುಗಳು ಅಥವಾ ತೊಟ್ಟಿ ಮನೆಗಳಲ್ಲಿ ಸ್ವಾಭಾವಿಕ ಹವಾನಿಯಂತ್ರಣವನ್ನು ಹೊಂದಿರುತ್ತವೆ. ಊರ ಸುತ್ತಮುತ್ತ ಮರಗಿಡಗಳಿರುವುದರಿಂದ ತಂಪಾದ ಗಾಳಿ ಆಗಿಂದಾಗ್ಗೆ ಸುಳಿದಾಡುತ್ತದೆ. ಬೇಗೆ ಪಡುವ ದೇಹ ಗಾಳಿಯ ತಂಪಿನ ಹಿತಪಡೆದು ಸುಖಿಸುತ್ತದೆ. ಬೇಗೆ ಪಡುವ ದೇಹ ಗಾಳಿಯ ತಂಪಿನ ಹಿತಪಡೆದು ಸುಖಿಸುತ್ತದೆ; ಸೆಕೆಯ ಸುಖವನ್ನು ಅನುಭವಿಸುತ್ತದೆ!

■ **ಶಿಕಾಕು**

## ಮಾತೇ ಮುತ್ತು

★ ಮಗುವನ್ನು ಮನುಷ್ಯನನ್ನಾಗಿ ಮಾಡಲು ತಾಯಿಗೆ 20 ವರ್ಷಗಳು ಬೇಕು. ಆತನನ್ನು ಮೂರ್ಖನನ್ನಾಗಿಸಲು ಹೆಂಡತಿಗೆ ಇಪ್ಪತ್ತೇ ನಿಮಿಷ ಸಾಕು.

—ರಾಬರ್ಟ್ ಫ್ರಾಸ್ಟ್

★ ಮಹಿಳೆಯೊಬ್ಬಳು ನಿಮ್ಮ ಜತೆ ಮಾತನಾಡುವಾಗ ಆಕೆ ಏನು ಹೇಳುತ್ತಿದ್ದಾಳೆ ಎನ್ನುವುದನ್ನು ಆಕೆಯ ಕಣ್ಣುಗಳನ್ನು ನೋಡಿ ಅರಿತುಕೊಳ್ಳಿ.

—ವಿಕ್ಟರ್ ಹ್ಯೂಗೊ

★ ಹೆಣ್ಣನ್ನು ನಾನು ಸಂಪೂರ್ಣ ಅರಿತಿದ್ದೇನೆ ಎನ್ನುವವನು ಮೂರ್ಖ; ಎಳ್ಳಷ್ಟೂ ಅರಿತಿಲ್ಲ ಎನ್ನುವವನು ಶತಮೂರ್ಖ.

—ಬೀಚಿ

★ ಬುದ್ಧಿವಂತ ಮಹಿಳೆ, ಪುರುಷನಿಗೆ ತಾನು ಹೇಳುವುದಕ್ಕೆಲ್ಲ ಸ್ವಲ್ಪ ಸಕ್ಕರೆ ಸೇರಿಸುತ್ತಾಳೆ. ಹಾಗೆಯೇ ಪುರುಷ ತನಗೆ ಹೇಳಿದ್ದರಲ್ಲಿ ಸ್ವಲ್ಪ ಉಪ್ಪು ತೆಗೆದು ಸ್ವೀಕರಿಸುತ್ತಾಳೆ.

—ಹೆಲೆನ್ ರೋಲ್ಯಾಂಡ್

★ ತಾಯಿ ಇರುವುದು ನೀನು ಆಕೆಯ ಮೇಲೆ ಒರಗಿ ನಿಲ್ಲುವುದಕ್ಕಲ್ಲ; ಯಾರ ಮೇಲೂ ನೀನು ಒರಗದಂತೆ ಕಲಿಸುವುದಕ್ಕೆ.

—ಡೊರೊತಿ ಫಿಶರ್

★ ನಲ್ವತ್ತು ದಾಟಿದ ಬಳಿಕ ಹೆಣ್ಣಿನ ಮನಸ್ಸಿಗೆ ಯೌವನ ತುಂಬಬೇಕು, ಮುಖಕ್ಕಲ್ಲ.

—ಬಿಲ್ಲೀ ಬರ್ಕ್

★ ಯಾವುದೇ ಮಹಿಳೆಗೆ ನೀನು ಸುಂದರಿಯಾಗಿದ್ದೀಯ ಎನ್ನಬೇಡಿ; ನಿನ್ನಂತಹ ಸುಂದರಿ ಇನ್ನೊಬ್ಬಳಿಲ್ಲ ಎನ್ನಿ.

—ಜೂಲ್ಸ್ ರೆನಾರ್ಡ್

★ ಕಿವುಡನೊಬ್ಬ ಕುರುಡಿಯನ್ನು ಮದುವೆಯಾದದ್ದೇ ಜಗತ್ತಿನ ಅತ್ಯಂತ ಯಶಸ್ವೀ ಮದುವೆ.

—ಕೋಲ್‌ರಿಡ್ಜ್

★ ಮಹಿಳೆಯ ಮೊದಲ ಪ್ರೇಮ ನೀನಾಗಿದ್ದರೆ ನಿನ್ನಷ್ಟು ಅದೃಷ್ಟವಂತ ಇನ್ನೊಬ್ಬನಿಲ್ಲ. ಹಾಗೆಯೇ ನಿನ್ನ ಕೊನೆಯ ಪ್ರೇಮ ಆಕೆಯಾಗಿದ್ದರೆ, ಆಕೆಯಷ್ಟು ಅದೃಷ್ಟವಂತೆ ಇನ್ನೊಬ್ಬರಿಲ್ಲ.

—ಚಾರ್ಲ್ಸ್ ಡಿಕೆನ್ಸ್